1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (119)148
2) ಸದಸ್ಯರ ಹೆಸರು : ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ)
3) ಉತ್ತರಿಸುವ ಸಚಿವರು : (ಶ್ರೀ ಬಸವರಾಜ್ ಬೊಮ್ಮಾಯಿ) ಜಲ ಸಂಪನ್ಮೂಲ ಸಚಿವರು

1. ಕೊಪ್ಪಳ ಜಿಲ್ಲೆಯ ಹಿರೇಹಳ್ಳ ಯೋಜನೆಯ 2001 ರಲ್ಲಿ ಉದ್ಘಾಟನೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಬಂದಿದೆ.

2. ಬಂದಿದ್ದಲ್ಲಿ, ಈ ಯೋಜನೆಯ ಬಲದಂಡೆ ಮತ್ತು ಎಡದಂಡೆ ಕಾಲುವೆಗಳು ಪೂರ್ಣಗೊಂಡಿವೆಯೇ ಮತ್ತು ಅವುಗಳ ಉಪ ಕಾಲುವೆಗಳು ನಿರ್ಮಾಣವಾಗಿವೆಯೇ?

ಬಲದಂಡೆ ಹಾಗೂ ಎಡದಂಡೆ ಕಾಲುವೆಗಳು ಪೂರ್ಣಗೊಂಡಿದ್ದು, ಉಪಕಾಲುವೆಗಳೂ ಬಹುತೇಕ ಪೂರ್ಣಗೊಂಡಿದ್ದು, ಕೆಲವು ಉಪಕಾಲುವೆಗಳಲ್ಲಿ ಬಾಗಶಃ ಲೈನಿಂಗ್, ಬಾಕಿ ಉಳಿದ ಕಾಲುವೆ ನಿರ್ಮಾಣ, ರೈಲ್ವೆ ಕ್ರಾಸಿಂಗ್ ಮತ್ತು ರಾಷ್ಟ್ರೀಯ ಹೆದ್ದಾರಿ ಕ್ರಾಸಿಂಗ್, ಕೆಲವು ಟೈಲೆಂಡ್ ಕಟ್ಟಡಗಳ ನಿರ್ಮಾಣ ಬಾಕಿ ಉಳಿದಿರುತ್ತದೆ.

3. ಸಧ್ಯದ ಪರಿಸ್ಥಿತಿಯಲ್ಲಿ ಎಷ್ಟು ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ?

8116 ಹೆ (20054 ಎಕರೆ) ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

4. ಈ ಯೋಜನೆ ಪ್ರಾರಂಭದ ಹಣಕಾಸಿನ ಅಂದಾಜು ಎಷ್ಟು, ಈಗಿನ ವೆಚ್ಚದ ಅಂದಾಜು ಎಷ್ಟು?

ಪ್ರಾರಂಭದ ಅಂದಾಜು ರೂ.**6.35**ಕೋಟಿ (**1978–79** ರ ದರ ಪಟ್ಟಿಯ ಅನ್ವಯ)

ವಿನ್ಯಾಸ ಬದಲಾವಣೆ ಹಾಗೂ ದರಗಳಲ್ಲಿನ ಹೆಚ್ಚಳದಿಂದ ಪರಿಷ್ಕೃತ ಅಂದಾಜು ರೂ.**272.00**ಕೋಟಿ (**2006–07**ರ ದರ ಪಟ್ಟಿಯ ಅನ್ವಯ)

5. ಕೊಪ್ಪಳ ತಾಲ್ಲೂಕಿನ ಯತ್ನಟ್ಟಿ ಗ್ರಾಮದಲ್ಲಿ ಬ್ರಿಡ್ಜ್ ಮತ್ತು ಬ್ಯಾರೇಜ್ ನಿರ್ಮಾಣ ಮಾಡಲು **ದಿ:08.06.2006** ರಂದು ಆದೇಶವಾಗಿದ್ದರೂ ಇದುವರೆವಿಗೂ ಪ್ರಾರಂಭಿಸದಿರಲು ಕಾರಣವೇನು;

ಸದರಿ ಬ್ರಿಡ್ಜ್ ಮತ್ತು ಬ್ಯಾರೇಜ್ ನಿರ್ಮಾಣಕ್ಕೆ ರೂ.**7.04** ಕೋಟಿ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಯೋಜನೆಗೆ ಬೇಕಾದ ನೀರಿನ ಲಭ್ಯತೆ,

ನೀರಾವರಿ ಹಾಗೂ ಇತರ ಸೌಲಭ್ಯಗಳ ಕುರಿತು ಸಾಧ್ಯಾಸಾಧ್ಯತೆಗಳ ಬಗ್ಗೆ ಕೂಲಂಕುಷವಾಗಿ ಪರಿಶೀಲನೆ ಮಾಡಲಾಗುತ್ತಿದೆ.

6. ಕೊಪ್ಪಳ ತಾಲ್ಲೂಕಿನ ಹಿರೇಹಳ್ಳ ಡ್ಯಾಂ ಅನ್ನು 1 ಮೀಟರ್ ಹೆಚ್ಚಿಸಲು ಈ ಹಿಂದಿನ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳು ಆದೇಶಿಸಿದ್ದು ನಿಜವೇ;

ಹಾಗಿದ್ದಲ್ಲಿ, ಸದರಿ ಯೋಜನೆಯ ಕಾಮಗಾರಿ ಕೈಗೆತ್ತಿಕೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸದರಿ ಕಾಮಗಾರಿ ಈಗ ಯಾವ ಹಂತದಲ್ಲಿದೆ ತಿಳಿಸುವುದು;

ನಿಜ

ಬಂದಿದೆ ಪ್ರಸ್ತಾವನೆ ಕುರಿತಂತೆ ತಾಂತ್ರಿಕ ಸಲಹಾ ಸಮಿತಿಯು ಪರಿಶೀಲಿಸಿ ಹಲವು ಆಕ್ಷೇಪಣೆಗಳನ್ನು ಮಾಡಿದ್ದು ಈ ಆಕ್ಷೇಪಣೆಗಳಿಗೆ ಸೂಕ್ತ ವಿವರಣೆಗಳೊಂದಿಗೆ ಪುನಃ ಸಮಿತಿಯ ಪರಿಶೀಲನೆಗೆ ಮಂಡಿಸಲಾಗುತ್ತಿದೆ. ತಾಂತ್ರಿಕ ಸಲಹಾ ಸಮಿತಿಯು ನೀಡಲಿರುವ ಅಭಿಪ್ರಾಯವನ್ನು ಆಧರಿಸಿ ಅಣೆಕಟ್ಟೆಯನ್ನು 1 ಮೀ ಎತ್ತರಿಸುವ ಕುರಿತು ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು.

7. ಕೊಪ್ಪಳ ತಾಲ್ಲೂಕಿನ ಹಿರೇಹಳ್ಳ ಭಾಗದ ಗ್ರಾಮಗಳಲ್ಲಿ ಪ್ರತಿ ವರ್ಷ ನೆರೆ ಹಾವಳಿಯಿಂದ ಕೃಷಿ ಮತ್ತು ತೋಟಗಾರಿಕೆ ಬೆಳೆಗಳು, ಹಾನಿಯಾಗಿದ್ದು ಹಾಗೂ ಪ್ರವಾಹಕ್ಕೆ ಸಿಲುಕಿದ ಮನೆಗಳು ದುರಸ್ತಿಪಡಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು?

ಈ ವಿಷಯವು ಕಂದಾಯ ಇಲಾಖೆಯ ವ್ಯಾಪ್ತಿಗೆ ಬರುತ್ತದೆ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (309)149
2) ಸದಸ್ಯರ ಹೆಸರು : ಶ್ರೀ ಕೃಷ್ಣಮೂರ್ತಿ ಕೆ.ಎಂ.(ಕಡೂರು)
3) ಉತ್ತರಿಸುವ ಸಚಿವರು : (ಶ್ರೀಬಸವರಾಜ್ ಬೊಮ್ಮಾಯಿ) ಜಲ ಸಂಪನ್ಮೂಲ ಸಚಿವರು

1. ಹಬ್ಬೆ ಹಳ್ಳದಿಂದ ಮದಗದಕೆರೆ ಅಯ್ಯನ ಕೆರೆಗೆ ನೀರು ಹರಿಸುವ ಯೋಜನೆಯ ಅನುಷ್ಠಾನಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಹೆಬ್ಬೆಹಳ್ಳ ಮದಗದ ಕೆರೆಗೆ ಸಂಪರ್ಕ ಕಾಲುವೆ ಯೋಜನೆಯ ರೂ.80.00 ಕೋಟಿಗಳ ಪ್ರಸ್ತಾವನೆಗೆ ತಾಂತ್ರಿಕ ಸಲಹಾ ಸಮಿತಿ ಮತ್ತು ಎಂ.ಐ.ಪಿ.ಸಿ. ಬೋರ್ಡ್ ವಿಧಿಸಿರುವ ಕೆಲವು ಷರತ್ತುಗಳಿಗೆ ಒಳಪಟ್ಟಂತೆ ಒಪ್ಪಿಗೆ ನೀಡಿವೆ ಈ ಪ್ರಸ್ತಾವನೆಯಲ್ಲಿ ಅಯ್ಯನ ಕೆರೆಗೆ ನೀರು ಹರಿಸುವ ಅಂಶ ಸೇರಿರುವುದಿಲ್ಲ.